ಜಿಲ್ಲಾಧಿಕಾರಿಗಳಿಗೆ ಅನುಮತಿ ಕೊಟ್ಟರೂ ಕೂಡ ಅಲ್ಲಿ ಕೆಲವು ಜಿಲ್ಲೆಗಳಲ್ಲಿ ಬರುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಬರದೇ ಇರುವಂತಹ ಜಿಲ್ಲೆಗಳಲ್ಲಿ ಉತ್ತರ ಕನ್ನಡ ಕೂಡ ಒಂದು. ಈಗಾಗಲೇ ನಾವು 155 ಜನಕ್ಕೆ ಅನುಮತಿ ಕೊಟ್ಟಿದ್ದೇವೆ. ಆದರೂ ಕೂಡ ನಮಗೆ ವೈದ್ಯರು ಸಿಗುತ್ತಿಲ್ಲ ಮತ್ತು ತಜ್ಞ ವೈದ್ಯರ ಕೊರತೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಕಳೆದ ಸದನದಲ್ಲಿ ಏನು ಕಾನೂನು ಆಗಿದೆ, ಆ ಕಾನೂನು ರಾಷ್ಟ್ರಪತಿಗಳ ಅಂಕಿತಕ್ಕೆ ಹೋಗಿದೆ. ಆ ಅಂಕಿತ ಆಗಿ ಬಂದೆರೆ, ಮುಂದಿನ ಜನವರಿ ಮತ್ತು ಜುಲೈನಲ್ಲಿ ವೈದ್ಯರ ಕೊರತೆ ನೀಗಿಸಲಿಕ್ಕೆ ಸಾಧ್ಯವಿದೆ. ಅದನ್ನು ಹೊರತುಪಡಿಸಿದಂತೆ ನರ್ಸ್‌ಗಳು ಮತ್ತು ಉಳಿದಂತಹ Laboratory Assistants ಏನು ಬೇಕೋ ಅದಕ್ಕೆ ಇತ್ತೀಚೆಗೆ ಹೈಕೋರ್ಟ್ ಆಜ್ಞೆಯನ್ನು ಕೊಟ್ಟಿದೆ. ಅಂಗವಿಕಲರ ವಿಷಯದಲ್ಲಿ reservation ಬಗ್ಗೆ ತಡೆಹಿಡಿದಿತ್ತು. ಈಗ ಆಜ್ಞೆ ಕೊಟ್ಟಿದೆ. ಈಗ ಹುದ್ದೆಗಳನ್ನು ತುಂಬುವಂತಹ ಪ್ರಕ್ರಿಯೆ ಪ್ರಾರಂಭಿಸುತ್ತಿದ್ದೇವೆ. ಪ್ರಸ್ತುತ 735 ಕಿರಿಯ ಮಹಿಳಾ ಆರೋಗ್ಯ ಸಹಾಯಕರು ಮತ್ತು 314 ಪುರುಷ ಆರೋಗ್ಯ ಸಹಾಯಕರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. Lab Assistant ಗಳನ್ನೂ ಸಹ ತುಂಬಿಕೊಳ್ಳುತ್ತಿದ್ದೇವೆ. ಸುಮಾರು 2,323 'ಡಿ' ಗ್ರೂಪ್ ನೌಕರರನ್ನು ತುಂಬಿಕೊಳ್ಳುತ್ತಿದ್ದೇವೆ. ಈ ಪ್ರಕ್ರಿಯೆ ಮುಗಿದ ತಕ್ಷಣವೇ 450 ಅರೆ ವೈದ್ಯರ ಹುದ್ದೆಗಳನ್ನು ತುಂಬಿಕೊಳ್ಳುತ್ತಿದ್ದೇವೆ. ಈ ಪ್ರಕ್ರಿಯೆ ಮುಗಿದ ತಕ್ಷಣ ಅಲ್ಲಿಯ ಕೊರತೆಗಳನ್ನು, ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಈ ಕೊರತೆಯನ್ನು ನೀಗಿಸಲು ಸಾಧ್ಯವಿದೆ. ಪ್ರಕ್ರಿಯೆ ಪ್ರಾರಂಭವಾಗಿದೆ. ಅದಾದ ತಕ್ಷಣವೇ priority ಮೇಲೆ ಆ ಜಿಲ್ಲೆಗೆ ಹಾಕುವಂತಹ ವ್ಯವಸ್ಥೆ ಮಾಡುತ್ತೇವೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ

90 (495) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಅಡಿಯಲ್ಲಿ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ 2009–10, 2010–11, 2011–12ನೇ ಸಾಲಿನಲ್ಲಿ ಬಂದ ಅನುದಾನವೆಷ್ಟು (ವಿವರ ನೀಡುವುದು);

ಆ) ಈ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ? (ವರ್ಷವಾರು ಯೋಜನೆವಾರು ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಅಡಿಯಲ್ಲಿ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ 2009–10, 2010–11, 2011–12ನೇ ಸಾಲಿನಲ್ಲಿ ಬಂದ ಅನುದಾನವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಯೋಜನೆಯಡಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಿವರಗಳು ಈ ಕೆಳಕಂಡಂತಿವೆ:

1. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ (ಆರ್.ಸಿ.ಹೆಚ್)
2. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಅಡಿಷನ್ಯಾಲಿಟೀಸ್ ಕಾರ್ಯಕ್ರಮ
3. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ
4. ಪಲ್ಸ್ ಪೋಲಿಯೋ ಕಾರ್ಯಕ್ರಮ
5. ರಾಷ್ಟ್ರೀಯ ಕುಷ್ಠರೋಗ ನಿವಾರಣಾ ಕಾರ್ಯಕ್ರಮ
6. ರಾಷ್ಟ್ರೀಯ ಮಲೇರಿಯಾ ನಿವಾರಣಾ ಕಾರ್ಯಕ್ರಮ
7. ಸಮಗ್ರ ರೋಗಗಳ ಕಣ್ಗಾವಲು ಯೋಜನೆ
8. ಪರಿಷ್ಕೃತ ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮ
9. ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ

ಎನ್.ಆರ್.ಹೆಚ್.ಎಂ. ಯೋಜನೆಯಡಿ ಈ ಮೇಲ್ಕಂಡ ಕಾರ್ಯಕ್ರಮಗಳಿಗೆ 2009–10, 2010–11 ಹಾಗೂ 2011–12ನೇ ಸಾಲಿನವರೆಗೆ ಭರಿಸಲಾದ ವೆಚ್ಚದ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಅನುಬಂಧ–1

ಭಾರತ ಸರ್ಕಾರದಿಂದ ಹಾಗೂ ಕರ್ನಾಟಕ ರಾಜ್ಯ ಸರ್ಕಾರದಿಂದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮಗಳಿಗೆ 2009–10 ರಿಂದ 2010–11ರವರೆಗೆ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು

ಕ್ರ. ಸಂ.	ವರ್ಷ	2009–10			2010–11			2011–12 (ಲೆಕ್ಕಪರಿಶೋಧನಾ ಪೂರ್ವ)		
		ಭಾರತ ಸರ್ಕಾರದಿಂದ ಅನುದಾನ ಬಿಡುಗಡೆ	ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ	ವೆಚ್ಚ	ಭಾರತ ಸರ್ಕಾರದಿಂದ ಅನುದಾನ ಬಿಡುಗಡೆ	ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ	ವೆಚ್ಚ	ಭಾರತ ಸರ್ಕಾರದಿಂದ ಅನುದಾನ ಬಿಡುಗಡೆ	ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆ	ವೆಚ್ಚ
1	ಆರ್.ಸಿ.ಹೆಚ್	13037.00	0.00	[illegible]	18301.01	100.00	[illegible]	19126.00		[illegible]
2	ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ	13945.00	12210.10	[illegible]	17987.31	13442.54	[illegible]	21642.00	16000.00	[illegible]
3	ಲಸಿಕಾ ಕಾರ್ಯಕ್ರಮ	341.36	0.00	[illegible]	829.00		[illegible]	200.00		[illegible]
4	ಪಲ್ಸ್ ಪೋಲಿಯೋ	991.01	0.00	[illegible]	991.01		[illegible]	506.66		[illegible]
5	ರಾಷ್ಟ್ರೀಯ ಕುಷ್ಠರೋಗ ನಿವಾರಣಾ ಕಾರ್ಯಕ್ರಮ	84.30		[illegible]	77.15		[illegible]	117.95		[illegible]
6	ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಹಾಗೂ ಕಡಿಗಟ್ಟುವಿಕೆ ಕಾರ್ಯಕ್ರಮ	126.62		[illegible]	134.62		[illegible]	276.12		[illegible]
7	ರಾಷ್ಟ್ರೀಯ ಮಲೇರಿಯಾ ನಿವಾರಣಾ ಕಾರ್ಯಕ್ರಮ	200.47		[illegible]	229.85		[illegible]	540.88		[illegible]
8	ಸಮಗ್ರ ರೋಗಗಳ ಕಣ್ಗಾವಲು ಯೋಜನೆ	115.19		[illegible]	218.19		[illegible]	103.48		[illegible]
9	ನಿಯಂತ್ರಣ ಕಾರ್ಯಕ್ರಮ	1064.33	0.00	[illegible]	1369.89	87.87	[illegible]	1601.68		[illegible]
10	ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ	1293.90		[illegible]	1207.31		[illegible]	1114.82		[illegible]
	Other CSS Programme	162.92		[illegible]	665.69		[illegible]	1039.25		[illegible]
	Total NRHM	31362.10	12210.10	[illegible]	42011.03	13630.41	[illegible]	46268.84	16000.00	[illegible]
11	Infrastructure Maintenance	12009.74		[illegible]	16745.67		[illegible]	17999.00		[illegible]
	ಒಟ್ಟು	43371.84	12210.10	[illegible]	58756.70	13630.41	[illegible]	64267.84	16000.00	[illegible]

ಡಾ: ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅತ್ಯಂತ ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಇಲ್ಲಿ ನಾನು ಮೂರು clarifications ಅನ್ನು ಕೇಳಬಯಸುತ್ತೇನೆ. ಮೊದಲನೆಯದು, ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಹಾಗೂ ತಡೆಗಟ್ಟುವ ಕಾರ್ಯ ಕ್ರಮದಲ್ಲಿ ಕೇಂದ್ರದಿಂದ ಬಿಡುಗಡೆಯಾದ ಅನುದಾನವನ್ನು 2009–10, 2010–11ರಲ್ಲಿ ಸಂಪೂರ್ಣ ವೆಚ್ಚ ಮಾಡಲಾಗಿದೆ. ಆದರೆ 2011–12 ರಲ್ಲಿ ಸುಮಾರು 276 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದ್ದರೂ, ವೆಚ್ಚ ಕೇವಲ 7 ಲಕ್ಷ 52 ಸಾವಿರ ರೂಪಾಯಿ. ಅಂದರೆ ಬಿಡುಗಡೆಯಾದ ಅನುದಾನದಲ್ಲಿ ಅತಿ ಕಡಿಮೆ ಪ್ರಮಾಣದ ವೆಚ್ಚ ಮಾಡಲಾಗಿದೆ. ಇದಕ್ಕೆ ಕಾರಣಗಳೇನು ಎಂಬುದನ್ನು ತಿಳಿಯಬಯಸುತ್ತೇನೆ. ಎರಡನೆಯದಾಗಿ, other CSS programme, ಇಲ್ಲಿಯೂ ಸಹಿತ 2010–11 ರಲ್ಲಿ 2011–12. ರಲ್ಲಿ ಕೇಂದ್ರ ದಿಂದ ಬಿಡುಗಡೆಯಾದ ಅನುದಾನವನ್ನು ಸಮಪರ್ಕವಾಗಿ ಬಳಸಿಕೊಳ್ಳಲಿಲ್ಲ. ವೆಚ್ಚ ಬಹಳ ಕಡಿಮೆಯಾಗಿದೆ. 2010–11 ರಲ್ಲಿ ಲಕ್ಷ ರೂಪಾಯಿ ಬಿಡುಗಡೆ ಯಾಗಿದ್ದರೆ, ಅದರಲ್ಲಿ ಕೇವಲ 34 ಲಕ್ಷ ರೂಪಾಯಿಗಳ ವೆಚ್ಚ ಮಾಡಲಾಗಿದೆ. ಅದರಂತೆ 2011–12 ರಲ್ಲಿ ಕೇಂದ್ರದಿಂದ 1039 ಲಕ್ಷ ರೂಪಾಯಿ ಬಿಡುಗಡೆ ಯಾಗಿದ್ದರೆ, ವೆಚ್ಚ ಕೇವಲ 56 ಲಕ್ಷ ರೂಪಾಯಿ. ಇವೆರಡೂ ಕಾರ್ಯ ಕ್ರಮಗಳಲ್ಲಿ ಹಣ ವೆಚ್ಚ ಮಾಡಲು ಏಕೆ ಸಾಧ್ಯವಾಗಲಿಲ್ಲ ಎನ್ನುವ ಬಗ್ಗೆ clarifications ಕೇಳುತ್ತಿದ್ದೇನೆ. ಮೂರನೆಯದಾಗಿ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿಯಲ್ಲಿ 2011–12 ರಲ್ಲಿ 3,787 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಲಾಗಿದೆ. ಇದರಲ್ಲಿ ಎಷ್ಟು ಹಣವನ್ನು NGO ಗಳ ಮುಖಾಂತರ ಖರ್ಚು ಮಾಡಲಾಗಿದೆ, ಪ್ರತಿಯೊಂದು ಜಿಲ್ಲೆಗೆ ಯಾವ್ಯಾವ NGO ಗಳಿಗೆ ಎಷ್ಟು ಹಣವನ್ನು ನೀಡಲಾಗಿದೆ ಎನ್ನುವ ಮಾಹಿತಿಯನ್ನು ನೀಡಿರುವುದಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಮಾಹಿತಿ ನೀಡಬೇಕೆಂದು ಕೋರುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ : ಮಾನ್ಯ ಸದಸ್ಯರಾದ ಡಾ.ಬಗಲಿ ಯವರು NRHM ಯೋಜನೆಯ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದರಲ್ಲೂ ವಿಶೇಷವಾಗಿ ಮೂರು ಅಂಶಗಳ ಬಗ್ಗೆ ತಮ್ಮ ಸ್ಪಷ್ಟೀಕರಣ ಕೇಳಿದ್ದಾರೆ. ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಹಾಗೂ ತಡೆಗಟ್ಟುವ ಕಾರ್ಯ ಕ್ರಮದಲ್ಲಿ ಮೊದಲನೆ ಎರಡು ವರ್ಷ ಹಣ ಖರ್ಚಾಗಿದೆ. 2011–12 ರಲ್ಲಿ ಹಣ ಖರ್ಚಾಗಲಿಲ್ಲ ಎನ್ನುವ ಅಂಶವನ್ನು ಮತ್ತು ಅದೇ ರೀತಿ ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದ ಅಡಿಯಲ್ಲಿ ಹಣ ಜಾಸ್ತಿ ಇದ್ದರೂ ಕೂಡ, ಅದರ ಖರ್ಚು ಕಡಿಮೆಯಾಗುತ್ತಿದೆ. CSS programme ನ ಹಣ ಕಡಿಮೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ನಮಗೆ ಈ ಹಣ ಬಿಡುಗಡೆಯಾ ಗುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಇರುತ್ತದೆ. ಯಾವ ಯೋಜನೆಗೆ ಹಣ ಬಿಡುಗಡೆ ಮಾಡುತ್ತೇವೆಯೋ ಅದಕ್ಕೇ ಹಣ ಖರ್ಚು ಮಾಡಬೇಕೆಂಬ ನಿರ್ದೇಶನ ಇದ್ದುದ್ದರಿಂದ ಆ ಹಣವನ್ನು ಅದೇ NRHM ನ ಬೇರೆ programme ಗೆ ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಅಲ್ಲಿ ಅವಶ್ಯಕತೆ ಎಷ್ಟಿದೆಯೋ ಅಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಹಾಗಾಗಿ ಅದರ ಹಣದ ಉಳಿಕೆ ತಮಗೆ ಕಾಣುತ್ತಿದೆ. ಈ ಬಾರಿ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಈ ಹಣವನ್ನು ತಾವು ಬೇರೆ ಬೇರೆ ಸ್ಕೀಮ್‌ಗಳಿಗೆ release ಮಾಡುತ್ತಿದ್ದೀರಿ. ಆ ಹಣವನ್ನು ಒಟ್ಟಿಗೆ ಪೂಲ್ ಮಾಡಿ ಅದೇ ಸ್ಕೀಮ್‌ಗಳಿಗೆ ಖರ್ಚು ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿದ್ದೇವೆ. ಆ ಅನುಮತಿ ದೊರೆಯುವಂತಹ ಸಾಧ್ಯತೆಗಳಿವೆ. ಅದು ದೊರೆತರೆ ಹಣವನ್ನು ಬೇರೆ ಯೋಜನೆಗಳಿಗೆ ಖರ್ಚು ಮಾಡುವಂತಹ ಸಾಧ್ಯತೆಗಳಿವೆ. ಎರಡನೆಯದಾಗಿ, NRHM ನ NGO ಗಳಿಗೆ ಮಾಹಿತಿಯನ್ನು ಅವರು ಕೇಳಿದ್ದಾರೆ. NGO ಗಳ ಸಂಪೂರ್ಣ ಮಾಹಿತಿ ಸದಸ್ಯರಿಗೆ ತಮ್ಮ ಮುಖಾಂತರ ಬರುವ ದಿನಗಳಲ್ಲಿ ಒದಗಿಸುತ್ತೇನೆ.